**PW_10**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

ಚಿತ್ರದುರ್ಗ

ಸಿ.ಸಿ.**1649/2022**

| | | |
|---|---|---|
| ಸಾಕ್ಷಿದಾರರ ಹೆಸರು | - ಡಾ. ಸರೋಜ ಹೆಚ್ | PW:10 |
| ಗಂಡನ ಹೆಸರು | - ಸೋಮಶೇಖರ್ ಹೆಚ್ | CW:10 |
| ವಯಸ್ಸು | - 48 ವರ್ಷ | ಪ್ರಮಾಣ ವಚನ ಬೋದಿಸಿದ |
| ಉದ್ಯೋಗ | - ವೈದ್ಯರು | ದಿ: 26/12/2025 |
| ವಾಸ | - ಚಿತ್ರದುರ್ಗ | |

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

ಜುಲೈ 2017 ರಿಂದ ಇಲ್ಲಿಯತನಕ ನಾನು ಮಕ್ಕಳ ವೈದ್ಯರಾಗಿ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ಚಾಸಾ.1 ರವರು ಹಲ್ಲೆಗೆ ಒಳಪಟ್ಟು ಗಲಾಟೆಯಿಂದ ನಮ್ಮ ಸಮಕ್ಷಮ 15.04.2022 ನೇ ತಾರೀಖು ಬೆಳಗ್ಗೆ 7.25 ಗಂಟೆಗೆ ನನ್ನ ಮುಂದೆ ಹಾಜರಾಗಿ ನಾನು ಅವರನ್ನು ಚಿಕಿತ್ಸೆಗೆ ಒಳಪಡಿಸಿದಾಗ ಎರಡು ಮೊಣಕೈಗೆ ತರಚಿದ ಗಾಯಗಳು ಕಂಡುಬಂದಿದ್ದು ಎಡಮೊಣಕೈಗೂ ಕೂಡ ತರಚಿದ ಗಾಯ ಆಗಿದ್ದು ಕಂಡುಬಂದಿರುತ್ತದೆ. ಎಡ ಮುಂಗೈ ಗೆ ನೋವು ಕಂಡುಬಂದಿರುತ್ತದೆ. ಸದರಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ನಾನು ಚಾಸಾ.1 ರವರಿಗೆ ನೀಡಿದ ಗಾಯದ ಪ್ರಮಾಣಪತ್ರದಲ್ಲಿ ನನ್ನ ಸಹಿ ಇದ್ದು ಸದರಿ ಪ್ರಮಾಣಪತ್ರವನ್ನು ನಿಪಿ.9 ಎಂದು ಗುರುತಿಸಲಾಯಿತು. ಅದರಲ್ಲಿನ ನನ್ನ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು. ಸದರಿ ಗಾಯಗಳು ಗಲಾಟೆ ಆದ ಸಂದರ್ಬದಲ್ಲಿ ಆದಂತಹ ಗಾಯಗಳಾಗಿರುತ್ತವೆ. ಚಾಸಾ.1 ರವರು ಒಂದು ದಿನ ನಮ್ಮ ಆಸ್ಪತ್ರೆಗೆ ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆದಿರುತ್ತಾರೆ.

**ಆರೋಪಿ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು ಸಮಯ**

**PW_10**

**ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು**
**ಜೆ ಎಂ ಎಫ್ ಸಿ ನ್ಯಾಯಾಧೀಶರು, ಚಿತ್ರದುರ್ಗ**